## ಜುಟ್ಟದ ಹಕ್ಕಿ ಮೊಟ್ಟೆ

ಮನೆಯ ಸುತ್ತಮುತ್ತ ಹಾರಾಡಿಕೊಂಡಿರುವ ಜುಟ್ಟದ ಹಕ್ಕಿಯೊಂದು ನಮ್ಮದೇ ಹೂದೋಟದ ಧಾಸವಾಳ ಗಿಡದ ಸಂಧಿಯಲ್ಲಿ ಸುಂದರವಾಗಿ ಗೂಡು ಕಟ್ಟಿತ್ತು. ಹಾಗೇ ಒಂದು ದಿನ ಮೂರು ಮೊಟ್ಟೆ ಇಟ್ಟು ಹೋಯಿತು. ಬಹುಶಃ ಮೊಟ್ಟೆ ಒಡೆದು ಮರಿಗಳು ಹೊರಬರುವವರೆಗೆ ಅವುಗಳ ರಕ್ಷಣೆಯೋ ಕಾಳಜಿಯೋ ಎನ್ನುವಂತೆ ಆಗಾಗ ಬಂದು ಮೊಟ್ಟೆಗಳಿಗೆ ಕಾವು ಕೊಟ್ಟು ಹೋಗುತ್ತದೆ. ಆ ಗೂಡಿನ ಸಮೀಪ ಯಾರಾದರೂ ಸುಳಿದರೆ ಥಟ್ಟನೆ ಅದು ಬಂದು ಗೂಡನ್ನು ಕಾವಲು ಕಾಯುತ್ತದೆ.

ಕಲ್ಪನಾ ಪ್ರಭಾಕರ ಸೋಮನಳ್ಳಿ, ಶಿರಸಿ





## ಶಿವ ಪಾರ್ವತಿ ಕುಂಭ

ಮಹಾರಾಷ್ಟ್ರದ ಸೋಲಾಪೂರ ಜಿಲ್ಲೆಯ ಅಕ್ಕಲಕೋಟ ತಾಲ್ಲೂಕಿನ ಹತ್ತಿಕಣಬಸ್ ಗ್ರಾಮದ ಭೋಜರಾಜ ಪಾಟೀಲರ ಮನೆಯಲ್ಲಿ ಜೋಳದ ನುಚ್ಚಿನಿಂದ ಜಗದೇವಿ ಪಾಟೀಲ ತಯಾರಿಸಿದ ಶಿವಪಾರ್ವತಿ ಕುಂಭದ ಮೂರ್ತಿ ಇದು. ಪೂಜೆ ಮಾಡಿ ಬಾಜಾ ಭಜಂತ್ರಿಯೊಂದಿಗೆ ಗ್ರಾಮದಲ್ಲಿ ಮೆರವಣಿಗೆ ಮಾಡಿ ಶಂಕರಲಿಂಗ ದೇವಸ್ಥಾನ ತಲುಪಿದ ಬಳಿಕ ಅಲ್ಲಿನ ದೇವರ ರಥ ಎಳೆಯುವ ಸಂಪ್ರದಾಯ ಇದೆ. ಪ್ರತಿ ವರ್ಷದ ಮೇ ತಿಂಗಳಿನಲ್ಲಿ ನೆರವೇರುವ ಜಾತ್ರೆಯ ಮರುದಿನ ಇದನ್ನು ಗೋವುಗಳಿಗೆ ತಿನ್ನಿಸಿ ಈ ಬಾರಿ ಮಳೆ ಬೆಳೆ ಚೆನ್ನಾಗಿ ಬರಲೆಂದು ಭಕ್ತರು ಹರಕೆ ಹೊತ್ತುತ್ತಾರೆ.

ಮನೀಷಾ ಪಾಟೀಲ, ವಿಜಯಪುರ

## ಸಸ್ಯಾಕ್ಷರದ ಹರೇರಾಮ!

ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರ ಸಮೀಪದ ಭಾನ್ಕುಳಿ ಮಠದ ಆವರಣದಲ್ಲಿ ನಿರ್ಮಾಣಗೊಂಡ 'ಗೋ ಸ್ವರ್ಗ'ಕ್ಕೆ ಹೋಗುವ ಹಾದಿಯ ಬಳಿ ಚಿಗುರು ಸಸ್ಯಗಳಿಂದ 'ಹರೇರಾಮ ಗೋ ಸ್ವರ್ಗ' ಎಂದು ಕಾಣುವಂತೆ ಸುಂದರವಾಗಿ ಕತ್ತರಿಸಲಾಗಿದೆ. ಕೆಲವು ಸಸ್ಯಗಳೇ ಹಾಗೆ, ಅವು ಒಂದೊಂದು ಕಲಾಕೃತಿಗೆ ಪೂರಕವಾಗಿ ಬೆಳೆಯುತ್ತದೆ. ಇವು ಹೆಚ್ಚು ಎತ್ತರ ಬೆಳೆಯುತ್ತಿರುವ ಹಾಗೆ ಅದರ ತುದಿ ಕತ್ತರಿಸಿ ಅಂದವನ್ನು ಹೆಚ್ಚಿಸಲಾಗುತ್ತದೆ. ಇಲ್ಲಿನ ನಿರ್ವಾಹಕರ ಸಸ್ಯಪ್ರೀತಿಯನ್ನು ಮೆಚ್ಚಲೇಬೇಕು.

ಗಣಪತಿ ಶಿರಳಗಿ, ಸಾಗರ

